ಶ್ರೀ ಜೆ.ಸಿ. ಮಾಧುಸ್ವಾಮಿ :— ಸನ್ಮಾನ್ಯ ಎಸ್.ಎಸ್. ಪಾಟೀಲರು ಸೂಕ್ತ ಕ್ರಮವನ್ನು ಜರುಗಿಸುತ್ತೇನೆ ಎಂಬ ಮಾತನ್ನು ಹೇಳಿದ್ದಾರೆಯೇ ಹೊರತು ಸಚಿವರು ಬಂದಮೇಲೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಲಿಲ್ಲ. ತಾವು ಬೇಕಾದರೆ ರೆಕಾರ್ಡನ್ನು ತರಿಸಿನೋಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬಂದಿರುವುದರಿಂದ ನಾವು ಕೇಳುತ್ತಿದ್ದೇವೆ. ಸಂಬಂಧಪಟ್ಟ ಸಚಿವರಿಂದ ನಾವು ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ.

(ಛ) ಅಂಕೋಲ ಕ್ಷೇತ್ರದಲ್ಲಿ ಶಾಲಾ ಕಾಲೇಜುಗಳಿಗೆ ಸ್ವಂತ ಕಟ್ಟಡ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ(ಅಂಕೋಲ) :— ಮಾನ್ಯ ಉಪಾಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರ ಗಮನವನ್ನು ಈ ಶೂನ್ಯ ವೇಳೆಯಲ್ಲಿ ನಾನು ಈ ವಿಷಯದ ಮೂಲಕ ಸೆಳೆಯುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಸಾಕಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಅಲ್ಲಿ ಶಿಕ್ಷಣ ಸೌಲಭ್ಯಗಳನ್ನು ನೀಡುತ್ತಿದೆ. ಸರ್ಕಾರದಿಂದ ಶಿಕ್ಷಣ ಸೌಲಭ್ಯಗಳನ್ನು ನೀಡುವಂತಹ ಒಂದೆರಡು ಕಾಲೇಜು ಮತ್ತು ಹೈಸ್ಕೂಲ್‌ಗಳನ್ನು ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ. ಯಲ್ಲಾಪುರದಲ್ಲಿ ಡಿಗ್ರಿ ಕಾಲೇಜು ಪ್ರಾರಂಭವಾಗಿ 10-12 ವರ್ಷಗಳಾಗಿವೆ. ಇದುವರೆಗೂ ಆ ಕಾಲೇಜಿಗೆ ಬೇಕಾದಂತಹ ಕಟ್ಟಡಗಳ ಸೌಲಭ್ಯವಿಲ್ಲ. ಅಲ್ಲಿ ಏನು ತೊಂದರೆಯಾಗಿದೆ ಎಂದರೆ ವೈ.ಟಿ.ಎಸ್.ಎಸ್. ಎಂಬ ಶಿಕ್ಷಣ ಸಂಸ್ಥೆಯು ಎಲ್ಲಾಪುರದ ಶಿಕ್ಷಣವನ್ನು ಅಭಿವೃದ್ಧಿ ಮಾಡುವಂತಹ ಒಂದು ಸಂಸ್ಥೆಯಾಗಿದೆ. ಅಲ್ಲಿ 10 ವರ್ಷಗಳಿಂದ ತರಗತಿಗಳನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅವರಿಗೆ ಇದುವರೆಗೂ ಆ ಕಟ್ಟಡಕ್ಕೆ ಬಾಡಿಗೆಯನ್ನೂ ಸಹ ಕೊಟ್ಟಿಲ್ಲ. ಇಷ್ಟೇ ಅಲ್ಲ ನಿರ್ವಹಣಾ ವೆಚ್ಚವನ್ನೂ ಸಹ ಕೊಡಲಿಲ್ಲ. ಆ ಶಿಕ್ಷಣ ಸಂಸ್ಥೆಯಲ್ಲಿ 450 ಜನ ವಿದ್ಯಾರ್ಥಿಗಳಿದ್ದು ಪ್ರತಿ ವರ್ಷ 60ರಿಂದ 70 ಪರ್ಸೆಂಟ್ ವಿದ್ಯಾರ್ಥಿಗಳು ತೇರ್ಗಡೆಯಾಗುತ್ತಿದ್ದಾರೆ. ಅಲ್ಲಿ ವಿಜ್ಞಾನ, ಗ್ರಂಥಾಲಯ, ಕ್ರೀಡಾಂಗಣ ಸೌಲಭ್ಯವಿಲ್ಲ. ಅನೇಕ ಅಧ್ಯಾಪಕರುಗಳ ಕೊರತೆ ಇದೆ. ಅಲ್ಲಿ ಒಳ್ಳೆಯ ಶಿಕ್ಷಣವು ಸಿಗುತ್ತಿದ್ದರೂ ಕಟ್ಟಡದ ಸೌಲಭ್ಯ ಇಲ್ಲದಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಆ ಸಂಸ್ಥೆಯವರು ನಿರ್ವಹಣ ವೆಚ್ಚ ಮತ್ತು ಬಾಡಿಗೆಯನ್ನು ಕೊಡದೆ ಹೋದರೆ ಇನ್ನು ಮುಂದೆ ತರಗತಿಗಳನ್ನು ನಡೆಸುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಮ್ಮ ಜಿಲ್ಲಾ ಮಂತ್ರಿಯವರಿಗೆ ಗೊತ್ತಿದೆ. ಇದರ ಬಗ್ಗೆ ಅಲ್ಲಿ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ. ಆ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗುವುದಕ್ಕೆ ಆಗದ ಪರಿಸ್ಥಿತಿ ಇದೆ. ನಾನು ಉನ್ನತ ಶಿಕ್ಷಣ ಸಚಿವರಲ್ಲಿ ಎರಡು ವಿಷಯಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಮೊದಲನೆಯಾದಾಗಿ, ಹೊಸ ಕಟ್ಟಡವನ್ನು ತಕ್ಷಣ ಪೂರ್ಣವಾಗುವಂತೆ ಮಾಡಬೇಕು. ಎರಡನೆಯದಾಗಿ, ವೈಟಿಎಸ್‌ಎಸ್ ಖಾಸಗಿಶಿಕ್ಷಣ ಸಂಸ್ಥೆ ಏನಿದೆ, ಅದಕ್ಕೆ ತರಗತಿಯನ್ನು ನಡೆಸುವುದಕ್ಕೆ ಮತ್ತು ಬಾಡಿಗೆಯನ್ನು, ನಿರ್ವಹಣಾ ವೆಚ್ಚವನ್ನು ಕೊಡಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ನಾನು ಕಳೆದ ಎರಡು ದಿವಸಗಳ ಹಿಂದೆ ಇಂತಹ ಸಮಸ್ಯೆಗೆ ಉತ್ತರವನ್ನು ಕೊಡುತ್ತಾನಮ್ಮಲ್ಲಿರತಕ್ಕಂತಹ ಸಂಪನ್ಮೂಲಗಳ ಬಗ್ಗೆಯೂ ಕೂಡ ತಿಳಿಸಿದ್ದೇನೆ. ಆದರೂ ಕೂಡ ಅವರು ಹೇಳಿದ ಹಾಗೆ ಈಗಾಗಲೇ ಸುಮಾರು 9 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡಿದ್ದೇನೆ. ಹಾಗೆ ಬಿಡುಗಡೆಯಾಗಿರುವಂತಹ ಹಣ ಖರ್ಚಾಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮೊದಲು ನೋಡಬೇಕಾಗುತ್ತದೆ. ಅದರ ಜೊತೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂಬುದರ ಬಗ್ಗೆ ಸಂಬಂಧಪಟ್ಟ ಮೇಲಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿಯ ವಾಸ್ತವ ಸ್ಥಿತಿಯನ್ನು ಅರಿತು ಅದಕ್ಕಾಗಿ ನನ್ನ ಅನುದಾನದ ಅಡಿಯಲ್ಲಿ, ಸಂಪನ್ಮೂಲದ ಅಡಿಯಲ್ಲಿ ಇದಕ್ಕೆ ಏನೊಂದು ಪರಿಹಾರವನ್ನು ಕೊಡಬೇಕು ಅದನ್ನು ಖಂಡಿತವಾಗಿ ಕೊಡಿಸುತ್ತೇನೆ. ಇದು ಅಗತ್ಯವಿದೆ ಎಂದು ನಾನು ಭಾವಿಸುತ್ತೇನೆ. ಇನ್ನು ಬಾಡಿಗೆಯ ವಿಚಾರದಲ್ಲಿ ಹೇಳಬೇಕೆಂದರೆ ಅದು ಬೇರೆ ವಿಷಯ. ನಾನು ಕಟ್ಟಡವನ್ನು ಕಟ್ಟಿಸಿಕೊಡುವುದು ಮಾತ್ರ. ಈಗ ಬಾಡಿಗೆಯ ವಿಚಾರವನ್ನು ತಾವು ಎತ್ತಿದ್ದೀರಿ. ಕಾನೂನಿನ ಅಡಿಯಲ್ಲಿ ಅದಕ್ಕೆ ಅವಕಾಶ ಇರುವುದಾದರೆ ಅದನ್ನು ಕೊಡಿಸಿಕೊಡುತ್ತೇನೆ.

(ಜ) ಗುಲ್ಬರ್ಗದಲ್ಲಿ ಸಾರಿಗೆ ಸಂಸ್ಥೆಯ ಕಛೇರಿ.

+ ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗ ಮತ್ತು ಹುಬ್ಬಳ್ಳಿ ಹೊಸದಾಗಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರವು ಒಂದು ಹೇಳಿಕೆಯನ್ನು ಕೊಟ್ಟಿತ್ತು. ಆದರೆ ಹುಬ್ಬಳ್ಳಿಯಲ್ಲಿ ಕಛೇರಿಯನ್ನು ಪ್ರಾರಂಭ ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಆದರೆ ಗುಲ್ಬರ್ಗದಲ್ಲಿ ಕಛೇರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಾ? ಇದರ ಜೊತೆಗೆ ಹೈದರಬಾದ್-ಕರ್ನಾಟಕಕ್ಕೆ ಸಾರಿಗೆ ಸೌಲಭ್ಯವನ್ನು ಯಾವಾಗ ಒದಗಿಸಿಕೊಡುತ್ತೀರೆಂದು ನಾನು ಸಂಬಂಧಪಟ್ಟ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಇದರ ಅವಶ್ಯಕತೆ ಬಹಳ ಇದೆ. ಗುಲ್ಬರ್ಗದಲ್ಲಿ ಇದರ ಸೆಂಟ್ರಲ್ ಆಫೀಸನ್ನು ಯಾವಾಗ ತೆರೆಯುತ್ತೀರೆಂದು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ ಇದು ಸರ್ಕಾರದ ನೀತಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಒದಗಿಸತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಮಾನ್ಯ ಉಪಾಧ್ಯಕ್ಷರೆ, ನನಗೆ ಸಮಂಜಸವಾದ ಉತ್ತರ ಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ಈಗ ಸದನದಲ್ಲಿ ಇಲ್ಲ. ನಾನು ಮಾನ್ಯ ಮಂತ್ರಿಗಳಿಗೂ ಹೇಳಿದ್ದೆ ಮತ್ತು ಸಭಾಧ್ಯಕ್ಷರಿಗೂ ಹೇಳಿದ್ದೆ. ಈಗ ನಾನು ಹೇಳುವಂತಹ ವಿಚಾರದಲ್ಲಿ ಕೇವಲ ಸರ್ಕಾರ ಪರಿಶೀಲಸಲಾಗುವುದು, ಮುಂದೆ ಉತ್ತರ